ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 314/2024

.............................................................................

CW 01
PW 01

| | | |
|---|---|---|
| ಹೆಸರು | : | ಗೀತಾ ಗಾವಡೆ |
| ಗಂಡನ ಹೆಸರು | : | ಪರಶುರಾಮ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | **ನವಗ್ರಾಮ, ತಾಃ ದಾಂಡೇಲಿ.** |

ದಿನಾಂಕ 17-06-2025 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 3 ರಿಂದ 5 ರವರು ಪರಿಚಯ, ಅವರು ನಮ್ಮ ಊರಿನವರು. ದಿನಾಂಕ 23-02-2024 ರಂದು ನನ್ನ ಮತ್ತು ನನ್ನ ಗಂಡನ ನಡುವೆ ಜಗಳ ಆಗಿತ್ತು. ಜಗಳವಾದ ವಿಷಯವನ್ನು ಅವರು ತನ್ನ ಗೆಳೆಯ ಅರ್ಬಾಜ್ ಪಯಾಜ್ ಷರಿಪ್ ರವರಿಗೆ ಹೇಳಿಕೊಂಡಿದ್ದರು. ಎರಡು ದಿನಗಳ ನಂತರ ಅಂದರೆ ದಿನಾಂಕ 26-02-2024 ಕ್ಕೆ ಅರ್ಬಾಜ್ ಪಯಾಜ್ ಷರಿಪ್ ರವರು ಸಂಜೆ 06-30 ಕ್ಕೆ ನಮ್ಮ ಮನೆಯ ಬಳಿ ಬಂದಿದ್ದರು. ಅವರು ರಸ್ತೆಯ ಮೇಲೆ ನಿಂತಿದ್ದರು. ನಾನು ಮನೆಯಿಂದ ಹೊರಗೆ ಬಂದೆ. ನನ್ನ ಗಂಡನಿಗೆ ನಾನು ನನ್ನ ತಮ್ಮನಿಂದ ಹೊಡೆಸಿದ್ದೇನೆಂದು ಅರ್ಬಾಜ್ ಪಯಾಜ್ ಷರಿಪ್ ರವರು ನಾನು ನಿನಗೂ ಮತ್ತು ನಿನ್ನ ತಮ್ಮನಿಗೂ ಹೊಡೆಯುತ್ತೇನೆ, ಈ ದಿನ ಕೊಲ್ಲುತ್ತೇನೆ ಎಂದು ಹೇಳಿದ. ಆದ್ದರಿಂದ ನಾನು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿದೆ.

ನಾನು ನೀಡಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ಗುರುತಿಸಿದ ಮೇರೆಗೆ ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ದಿನಾಂಕ 27-02-2024 ರಂದು ಪೊಲೀಸರು ನಮ್ಮ ಮನೆಯ ಬಳಿ ಬಂದು ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಬೆಳಗ್ಗೆ 10-30 ರಿಂದ 11-30 ರ ವರೆಗೆ ಜರುಗಿಸಿದರು.

ಸದರಿ ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಘಟನಾ ಜಾಗದ ಪಂಚನಾಮೆಯನ್ನು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

ಪಂಚನಾಮೆಯ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈಗ ನ್ಯಾಯಾಲಯದ ಮುಂದೆ ಇರುತ್ತಾನೆ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಆರ್ ವಿ ಜಿ ವಕೀಲರಿಂದ.

ಆ ದಿನ ನಾನು ಮತ್ತು ನನ್ನ ಗಂಡ ನಡುವೆ ಜಗಳವಾಗಿತ್ತು. ಜಗಳವಾದ ಕುರಿತು ಯಾವುದೇ ಪಿರ್ಯಾದಿ ನೀಡಿಲ್ಲ. ಆರೋಪಿಯ ಮನೆ ನಮ್ಮ ಮನೆಯ ಮುಂದಿನ ಸಾಲಿನ ಮನೆಗಳಲ್ಲಿ ಬರುತ್ತದೆ. ಆರೋಪಿ ಪೆಟಿಂಗ್ ಕೆಲಸ ಮಾಡುತ್ತಾನೆ. ಆರೋಪಿಯ ತಂದೆ ಗೌಂಡಿ ಕೆಲಸ ಮಾಡುತ್ತಾರೆ, ತಾಯಿ ಪೇಪರ್ ಮಿಲ್ ನಲ್ಲಿ ಕೆಲಸಕ್ಕೆ ಹೋಗುತ್ತಾರೆ. ನಿಮ್ಮ ಗಂಡನ ತಮ್ಮ ಎಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ನನ್ನ ಗಂಡ ಒಬ್ಬರೆ ಇದ್ದಾರೆ ಅವರಿಗೆ ತಮ್ಮ ಇಲ್ಲ ಎನ್ನುತ್ತಾರೆ. ಆರೋಪಿ ನಮ್ಮ ಮನೆಯ ಬಳಿ ಬುದ್ದಿವಾದ ಹೇಳಲು ಬಂದಿರಲಿಲ್ಲ, ನಾನು ನನ್ನ ಗಂಡನನ್ನು ಹೊಡೆಸಿದ್ದೇನೆ ಎಂದು ಹೇಳಲು ಬಂದಿದ್ದ ಎನ್ನುತ್ತಾರೆ. ಆರೋಪಿ ನಿಮ್ಮ ಬಳಿ ಬಂದು ನಿಮ್ಮ ತಮ್ಮನಿಂದ ನಿಮ್ಮ ಗಂಡನನ್ನು ಏಕೆ ಹೊಡೆಸಿದ್ದಿ ಎಂದು ಕೇಳಲು ಬಂದಿದ್ದ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ದೂರನ್ನು ನಾನು ಲಿಖಿತವಾಗಿ ಬರೆದಕೊಂಡು ಹೋಗಿರಲಿಲ್ಲ, ನಾನು ಪೊಲೀಸ ಠಾಣೆಗೆ ಹೋಗಿ ವಿಷಯ ಹೇಳಿದೆ ಅವರು ಬರೆದುಕೊಂಡಿದ್ದಾರೆ ಎನ್ನುತ್ತಾರೆ. ನೀವು ಸಹಿ ಮಾಡುವಾಗ ಹಾಳೆಯಲ್ಲಿ ಬರೆಯಲಾಗಿತ್ತೆ ಅಥವಾ ಖಾಲಿ ಹಾಳೆ ಇತ್ತಾ ಎಂದರೆ ಸಾಕ್ಷಿ ಖಾಲಿ ಹಾಳೆ ಇದ್ದಾಗ ಪೊಲೀಸರು ಒಂದು ಬಾರಿ ಸಹಿ ಪಡೆದಿದ್ದರು, ನಂತರ ಗಣಕಯಂತ್ರದಲ್ಲಿ ಟೈಪ್ ಮಾಡಿದ ನಂತರ ಅದಕ್ಕೆ ನಾನು ಕಪ್ಪು ಬಣ್ಣದ ಪೆನ್ಸಿಲ್ ನಂತೆ ಇರುವ ಮಷಿನ್ ನಿಂದ ಸಹಿ ಮಾಡಿರುತ್ತೇನೆ. ನಮ್ಮ ಮನೆಯಿಂದ ಪೊಲೀಸ ಠಾಣೆ 1 ವರೆ ಯಿಂದ 2 ಕಿ.ಮೀ ಆಗಬಹುದು ಎನ್ನುತ್ತಾರೆ. ಆರೋಪಿತ ನಮ್ಮ ಮನೆಗೆ ಬಂದಾಗ ಸಂಜೆ 06-30 ಆಗಿತ್ತು. ಆರೋಪಿ ಬಂದು ಹೋದ ನಂತರ ಎಷ್ಟು ಸಮಯಕ್ಕೆ ನೀವು ಠಾಣೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ 07-00

ಗಂಟೆಗೆ ಹೋದೆ ಎನ್ನುತ್ತಾರೆ. ಠಾಣೆಯಲ್ಲಿ ದೂರು ನೀಡಿ ಠಾಣೆಯಿಂದ ಹೊರ ಬಂದಾಗ 09-30 ಆಗಿರಬಹುದು ಎನ್ನುತ್ತಾರೆ.

ಪಂಚನಾಮೆಯನ್ನು ಬರೆಯಲು ಯಾರು ಮಾಹಿತಿ ನೀಡಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಾನು ಹೇಳುತ್ತಾ ಹೋದೆ ಪೊಲೀಸರು ಬರೆಯತ್ತಾರೆ ಹೋದರು. ಪಂಚನಾಮೆಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿಯು ವಿನಾಯಕ ಮತ್ತು ಜ್ಯೋತಿಬಾ ಸಹಿ ಮಾಡಿದ್ದಾರೆ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಠಾಣೆಯಲ್ಲಿ ಎಷ್ಟು ಬಾರಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ 3-4 ಬಾರಿ ಸಹಿ ಮಾಡಿದ್ದೇನೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಪೊಲೀಸರು ಎಲ್ಲಿ ಸಹಿ ಮಾಡು ಎಂದು ಹೇಳುತ್ತಾರೋ ಅಲ್ಲಿ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಾಲ್ಕು ಸಹಿಗಳನ್ನು ಯಾವ ಯಾವ ದಾಖಲೆಗೆ ಪಡೆದಿದ್ದಾರೇ ಎಂದು ಹೇಳಲಾಗತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಓಣಿಯಲ್ಲಿ ನಾನು ಸಾಕಷ್ಟು ಜನರೊಂದಿಗೆ ಸಣ್ಣ ಪುಟ್ಟ ವಿಷಯವಾಗಿ ಜಗಳ ಮಾಡುತ್ತೇನೆ ಎಂದರೆ ಸರಿಯಲ್ಲ. ಓಣಿಯಲ್ಲಿ ನಿಮ್ಮ ಮಾತನ್ನು ಯಾರು ಕೇಳುವುದಿಲ್ಲವೋ ಅವರ ವಿರುದ್ದ ದೂರು ನೀಡುತ್ತೇನೆ ಎಂದು ಹೇಳುತ್ತೀರಿ ಎಂದರೆ ಸರಿಯಲ್ಲ. ನನ್ನ ತಮ್ಮನು ಕೂಡ ಜಗಳ ಸ್ವಭಾದವನು ಎಂದರೆ ಸರಿಯಲ್ಲ. ಆರೋಪಿ ಬುದ್ದಿವಾದ ಹೇಳಿದ್ದಾನೆ ಎಂದು ಅವರ ವಿರುದ್ದ ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ. ನಾನು ದೂರು ನೀಡಿದ ದಿನ ಯಾವುದೇ ಘಟನೆ ನಡೆದಿಲ್ಲ, ಸುಳ್ಳು ದೂರು ನೀಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಇರುವ ವ್ಯಕ್ತಿಗಳನ್ನು ಹೆದರಿಸಿ ತಂದು ನಿಲ್ಲಿಸಿದ್ದೀರಿ ಎಂದರೆ ಸಾಕ್ಷಿ ಅವರು ಜಗಳ ನೋಡಿದ್ದಕ್ಕೆ ಸಾಕ್ಷಿದಾರರಾಗಿ ನಿಂತಿದ್ದಾರೆ ಎನ್ನುತ್ತಾರೆ. ಯಾವುದೇ ಘಟನೆ ನಡೆಯದಿದ್ದರೂ ನಡೆದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.